**(ದಿಃ 24.06.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.)**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಶ್ರೀ ಎಸ್ ಕೆ ಹೆಚ್ ವಕೀಲರಿಂದಃ –**

7. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಾನು ಹಾಜರು ಮಾಡಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ನಿ ಡಬ್ಲ್ಯೂ 1 ಹೋರ ರೋಗಿ ಚೀಟಿ ಪುಸ್ತಕ.
ನಿ ಡಬ್ಲ್ಯೂ 2 ಗೈರು ಹಾಜರಾತಿ ಕುರಿತು ವೈದ್ಯಕೀಯ ಪ್ರಮಾಣ ಪತ್ರ.
ನಿ ಡಬ್ಲ್ಯೂ 3 ಸದೃಡತೆ ಕುರಿತು ವೈದ್ಯಕೀಯ ಪ್ರಮಾಣ ಪತ್ರ.

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಆರ್ ಎಸ್ ಬಿ ವಕೀಲರಿಂದಃ –**

8. ನನಗೆ ಸೇವಾ ನಿಯಮಗಳ ಮಾಹಿತಿ ಇತ್ತು. ರಜೆ ಅರ್ಜಿಯನ್ನು ಸಲ್ಲಿಸಿ ಮಂಜೂರಿಯಾದ ನಂತರ ರಜೆ ಮೇಲೆ ತೆರಳತಕ್ಕದ್ದು ಅನ್ನುವುದು ನಿಜ. ಮುಂಚೆ ನಾನು ಧಾರವಾಡ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಈ ಮುಂಚೆ ದಿನಾಂಕಃ 06.04.2015 ನನ್ನನ್ನು ಸೇವೆಯಿಂದ ವಜಾ ಮಾಡಲಾಗಿತ್ತು ಅನ್ನುವುದು ನಿಜ. ನಾನು ಕಾರ್ಮಿಕ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿದ್ದೆ ಅನ್ನುವುದು ನಿಜ. ಸದರಿ ಪ್ರಕರಣ ಲೋಕ್ ಅದಾಲತ್ ಮುಂದೆ ಇತ್ಯರ್ಥವಾಯಿತು ಅನ್ನುವುದು ನಿಜ. ದಿನಾಂಕಃ 26.05.2016 ರಂದು ನಾನು ಪುನಃ ಸೇವೆಗೆ ವರದಿ ಮಾಡಿಕೊಂಡೆ ಅನ್ನುವುದು ನಿಜ.
9. ದಿನಾಂಕ 05.06.2016 ರಿಂದ ನಾನು ಸೇವೆಗೆ ಹಾಜರಾಗಿಲ್ಲ ಅನ್ನುವುದು ನಿಜ. ನಾನು ನನ್ನ ಹೆಂಡತಿ ಮೂಲಕ ರಜೆ ಅರ್ಜಿ ಕಳಿಸಿದ್ದೆ ಮತ್ತು ಸಲ್ಲಿಸಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ರಜೆ ಅರ್ಜಿ ಸಲ್ಲಿಸದೆ ಕರ್ತವ್ಯಕ್ಕೆ ಗೈರು ಹಾಜರಾಗಿದ್ದೆ ಅನ್ನುವುದು ಸುಳ್ಳು.
10. ಕೆಸಲಕ್ಕೆ ಹಾಜರಾಗಿ ಸಲ್ಲಿಸಲು ನಿ ಎಂ 5 ರಂತೆ ಕರೆ ಪತ್ರ ಕಳಿಸಿದ್ದರು ಅನ್ನುವುದು ನೆನಪಿಲ್ಲ. ಈಗ ತೋರಿಸಿದ ಅಂಚೆ ಸ್ವಿಕೃತಿ ಪತ್ರದ ಮೇಲೆ ಇರುವ ಸಹಿ ನನ್ನದಲ್ಲ. ನನ್ನ ಮುಖ್ಯ ವಿಚಾರಣೆಗೆ ಮಾಡಿದ ಸಹಿ ಮತ್ತು ಅಂಚೆ ಸ್ವಿಕೃತಿ ಪತ್ರದ ಮೇಲಿನ ಸಹಿಗಳು ಒಬ್ಬರೆ ಮಾಡಿದ್ದು ಅನ್ನುವುದು ಸುಳ್ಳು.

(ಈ ಸಂದರ್ಭದಲ್ಲಿ ಎದುರುದಾರರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿಯಿದೆ,

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ.**